ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ, ದಿನಾಂಕ ೨೨ನೇ ಫೆಬ್ರವರಿ ೧೯೮೯, ಫಾಲ್ಗುಣ ಶು. ೧೯೧೦ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯–೦೫ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್‌ರವರು) ಪೀಠವನ್ನು ಅಲಂಕರಿಸಿದ್ದರು.]

ಕಾಂಗ್ರೆಸ್ (ಐ) ಪಕ್ಷದ ಸದಸ್ಯರಿಂದ ಧರಣಿ

(ಕಾಂಗ್ರೇಸ್ ಐ 'ಪಕ್ಷದ' ಸದಸ್ಯರು ಧರಣಿ ಕುಳಿತಿದ್ದರು)

(ಗೊಂದಲ)

ಅಧ್ಯಕ್ಷರು.—ತಾವು ಸ್ವಲ್ಪ ಕೇಳಿ. ಇವತ್ತು ೨೭ ಪ್ರಶ್ನೆಗಳು ಇವೆ. ೭ ಗಮನ ಸೆಳೆಯುವ ಸೂಚನೆಗಳು ಇವೆ. ನಿಯಮ ೩೫೪ ರದ್ದು ೩೫೫ ಇವೆ. ಶ್ರೀಮತಿ ನಾಗರತ್ನಮ್ಮನವರು ಸಹ ಈ ಪೀಠದಲ್ಲಿ ಕುಳಿತು ೬ ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ತಾವೆಲ್ಲ ದಯವಾಡಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. ನಾನು ತಮಗೆ ಕಾಲಾವಕಾಶವನ್ನು ಮಾಡಿ ಕೊಡುತ್ತೇನೆ. ತುಂಬಾ ಕಾರ್ಯಕಲಾಪಗಳಿವೆ. ದಯವಾಡಿ ತಮ್ಮ, ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಪುನಃ ಹೇಳುತ್ತೇನೆ ಎಲ್ಲಾ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಿ.

(ಕಾಂಗ್ರೇಸ್ ಐ 'ಪಕ್ಷದ' ಮಾನ್ಯ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಿದ್ದರು)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದರ ಬಗ್ಗೆ ಸಿ.ಬಿ.ಐ. ಎನ್‌ಕ್ವೈರಿ ಆಗಬೇಕು.

ಅಧ್ಯಕ್ಷರು.—ನೋಡಿ ಇವತ್ತು ೭ ಕಾಲಿಂಗ್ ಅಟೆನ್‌ಷನ್ ಇವೆ. ಮುನ್ನೂರರ ಮೇಲಪತ್ನಾಲ್ಕರ ಮೇಲಿನ ವಿಷಯ ೩೫೫ ಇವೆ.

ಶ್ರೀ ಆರ್, ವಿ. ದೇಶಪಾಂಡೆ.—ತಮ್ಮ ಮುಖಾಂತರ ವಿರೋಧಪಕ್ಷದ ಮಾನ್ಯ ಸದಸ್ಯರುಗಳಿಗೆ ತಮ್ಮ ತಮ್ಮ ಸ್ಥಾನಗಳಲ್ಲಿ ಹೋಗಿ ಕುಳಿತುಕೊಂಡು ಕಾರ್ಯಕಲಾಪ ನಡೆಸುವುದಕ್ಕೆ ಸಹಕರಿಸಬೇಕೆಂದು ಬಹಳ ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇವತ್ತು ಸಾಕಷ್ಟು ಮಹತ್ವದ ವಿಚಾರಗಳಿವೆ.

ಶ್ರೀ ಎನ್. ಎಂ. ಅಡ್ಯಂತಾಯ.—ಇವರು ಹೇಳುವುದಕ್ಕಿಂತ ದೊಡ್ಡ ಮಹತ್ವದ ವಿಷಯ ಇದಾಗಿದೆ.

ಅಧ್ಯಕ್ಷರು.—ನೀವು ಹೇಳಿದ್ದಾಯಿತು. ಈಗ ಅವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಕಾಂಗ್ರೆಸ್ ಪಕ್ಷದ ಮಿತ್ರರುಗಳು ದಯವಿಟ್ಟು ಸೀಟುಗಳಿಗೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

(ಸರ್ಕಾರದ ವಿರುದ್ಧ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ವೆಲ್‌ನಲ್ಲಿ ನಿಂತುಕೊಂಡು ಜೋರಾಗಿ ಘೋಷಣೆಗಳನ್ನು ಕೂಗುತ್ತಿದ್ದರು.)